
# ಪ್ರಾರ್ಥನೆಯ ಬಗ್ಗೆ ಪಾಠಗಳು

ಅಧ್ಯಯನ # 34



## ಸತ್ಯವೇದದಲ್ಲಿರುವ
## ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 34

## ಪ್ರಾರ್ಥನೆಯ ಬಗ್ಗೆ ಪಾಠಗಳು

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ಅನೇಕ ಕ್ರೈಸ್ತರಿಗೆ ಅತಿ ಪ್ರಿಯವಾಗಿರುವ ವಿಷಯವಾಗಿದ್ದರೂ ಸಾಮಾನ್ಯವಾಗಿ ಅದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳದೆ ಇರುವ ವಿಷಯವನ್ನು ಕುರಿತು ಅಭ್ಯಾಸಮಾಡೋಣ!

ಹೌದು! ಇಂದು ನಾವು ಪ್ರಾರ್ಥನೆಯ ವಿಷಯವನ್ನು ಕುರಿತು ಅಭ್ಯಾಸಮಾಡಲಿದ್ದೇವೆ –

**ಪ್ರಾರ್ಥನೆ ಎಂದರೇನು?**

**ಮತ್ತು, ಪ್ರಾರ್ಥನೆಯನ್ನು ಕುರಿತು ಸತ್ಯವೇದವು ಏನನ್ನು ಬೋಧಿಸುತ್ತದೆ?**



ಈ ದಿನಗಳಲ್ಲಿ ಲೋಕದ ಎಲ್ಲಾ ಜನರು ಮತ್ತು ಮತದವರು ದೇವರೊಂದಿಗೆ ಸಂಭಾಷನೆ ಮಾಡಲು ಪ್ರಾರ್ಥಿಸುತ್ತಾರೆ. ವಿಧವಿಧವಾದ ಪಂಗಡದ ಎಲ್ಲಾ ಕ್ರೈಸ್ತರೂ ಮತ್ತು ಸಭೆಯವರೂ ಸಹ

ಪ್ರಾರ್ಥನೆಗೆ ಅಧಿಕವಾದ ಸಮಯ ಮತ್ತು ಮುಖ್ಯತ್ವವನ್ನು ಕೊಡುತ್ತಾರೆ.

ನಿಜಾಂಶವೇನೆಂದರೆ, ಸತ್ಯವೇದ ಅಭ್ಯಾಸಕ್ಕಿಂತ ಅಧಿಕವಾಗಿ ಪ್ರಾರ್ಥನೆಗೆ ಮುಖ್ಯತ್ವವನ್ನು ಕೊಡುತ್ತಾರೆ!!

ಆದ್ದರಿಂದ ನಾವು ನೋಡುವದೇನೆಂದರೆ –

**– ಪ್ರಾರ್ಥನಾ ಕೂಟಗಳು**

**– ಉಪವಾಸ ಪ್ರಾರ್ಥನೆಗಳು**

**– ರಾತ್ರಿಯಿಡೀ ಪ್ರಾರ್ಥನೆಗಳು**

**– ಬಂಧನದ (ಸರಪಳಿ)** (chain prayer) **ಪ್ರಾರ್ಥನೆಗಳು ಇತರೆ.**



**ಹಾಗಾದರೆ, ನಿಜವಾಗಿಯೂ ಪ್ರಾರ್ಥನೆ ಎಂದರೇನು?**



ಪ್ರಾರ್ಥನೆಯೆಂದರೆ ಸಾಮಾನ್ಯವಾಗಿ ದೇವರಿಗೆ –

ಸ್ತುತಿಸಲ್ಲಿಸುವದು ಅಥವಾ ಕೃತಜ್ಞತೆಯನ್ನು ಸಲ್ಲಿಸುವದು ಅಥವಾ ಬಿನ್ನಹಮಾಡುವದು ಅಥವಾ ವಿಜ್ಞಾಪನೆ ಸಲ್ಲಿಸುವದಾಗಿದೆ.

**ಹೌದು! ಅದು ದೇವರೊಂದಿಗೆ ವೈಯಕ್ತಿಕವಾಗಿ ಮತ್ತು ನೇರವಾಗಿ ಸಂಭಾಷನೆ ಮಾಡುವದಾಗಿದೆ.**

ಪ್ರಾರ್ಥನೆಯ ಬಗ್ಗೆ ಇಷ್ಟು ಮಾತ್ರ ನಮಗೆ ಗೊತ್ತಿದೆ!

ಈಗ ನಾವು **ಪ್ರಾರ್ಥನೆಯ ಬಗ್ಗೆ ಗೊತ್ತಿಲ್ಲದೆ ಇರುವ** ಕೆಲವು ವಿಷಯವನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ!!

ಹೌದು! **ಸತ್ಯವೇದದ ದೃಷ್ಟಿಯಿಂದ ಪ್ರಾರ್ಥನೆ** ಎಂದರೆ ವಾಕ್ಯವು ತಿಳಿಸುವ ಪ್ರಕಾರ **ಆಯ್ದ ಕೆಲವರಿಗೆ** ಮಾತ್ರ **ತೆರೆದಿರುವ** ಮತ್ತು **ಸಿಗುವ** ಒಂದು **ಬಾಗ್ಯವಾಗಿದೆ!!**


**ಅನೇಕರಿಗೆ ಇದೊಂದು ಆಶ್ಚರ್ಯವೆಂದೆನಿಸಬಹುದು!**

ಆದರೆ, ನಮ್ಮ ಯಜಮಾನನಿಂದಲೇ ಇದನ್ನು ಕಲಿತುಕೊಳ್ಳೋಣ!

**ಆತನು ಜನರ ಗುಂಪನ್ನು ನೋಡಿ ಪ್ರತಿದಿನ ಪ್ರಾರ್ಥನೆ ಮಾಡಿ ಎಂದು ಎಂದಿಗೂ** ಹೇಳಲಿಲ್ಲ ಮತ್ತು ಬೋಧಿಸಲಿಲ್ಲ!!

**ಏಕೆ ಆತನು ಹಾಗೆ ಹೇಳಲಿಲ್ಲ?**

ಮತ್ತು ಈಗ **ಇನ್ನೊಂದು ಆಶ್ಚರ್ಯದ** ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –



**ಯೋಹಾನ 17:9**

"**ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರ ಕೇಳಿಕೊಳ್ಳುತ್ತೇನೆ.**"



**ನೀವು ಈ ವಾಕ್ಯವನ್ನು ಗಮನಿಸಿರಿ!!**

ಸ್ವತಃ **ಲೋಕರಕ್ಷಕನೇ** ಈ **ಲೋಕಕ್ಕಾಗಿ ಪ್ರಾರ್ಥಿಸುವದಿಲ್ಲ!!**

**ನೀವು ಇದನ್ನು ನಂಬುತ್ತೀರಾ?**

**ಯೇಸು ಇದನ್ನು ಹೀಗೆ ಏಕೆ ಅಂದನು??**

ಏಕೆಂದರೆ, ಸತ್ಯವೇದದಲ್ಲಿ ಪ್ರಾರ್ಥನೆಯ ಬಗ್ಗೆ ಏನೋ ಒಂದು **ವಿಷೇಶತೆಯನ್ನು** ಕುರಿತು **ಅರ್ಥಮಾಡಿಕೊಳ್ಳಬೇಕು!**

ಈ ವಿಷಯವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು **ಮೊದಲು** ನಾವು ದೇವರು ಮತ್ತು ಮನುಷ್ಯನ ನಡುವೆ ಇರುವ ಸಂಬಂಧದ **ಇತಿಹಾಸವನ್ನು** ಅಭ್ಯಾಸಮಾಡಬೇಕು!!

ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –



**ಆದಿಕಾಂಡ 4:14**

"ನೀನು ಈ ಹೊತ್ತು ನನ್ನನ್ನು ಸ್ವದೇಶದಿಂದ ಹೊರಡಿಸುತ್ತೀಯಲ್ಲಾ; ನಿನ್ನ ಸಾನ್ನಿಧ್ಯವು ತಪ್ಪಿತು...."

ಹೌದು! **ಕಾಯಿನನ** ಮಾತುಗಳು ಬಿದ್ದುಹೋದ ಮನುಷ್ಯಜಾತಿಯ **ಸ್ಥಿತಿಯನ್ನು** ಸೂಚಿಸುತ್ತದೆ –

"....ನಿನ್ನ ಸಾನ್ನಿಧ್ಯವು ತಪ್ಪಿತು...."

**ಇದು ದೇವರಿಂದ ಬೇರ್ಪಡುವಿಕೆಯಾಗಿದ್ದನ್ನು ಸೂಚಿಸುತ್ತದೆ!!**

**ಮತ್ತು ನಿಜವಾಗಿಯೂ! ಎಲ್ಲಾ ಮನುಷಜಾತಿಯು ಅಂದಿನಿಂದ ದೇವರ ಸನ್ನಿಧಾನದಿಂದ ಬೇರ್ಪಟ್ಟಿದ್ದಾರೆ ಮತ್ತು ಅವರ ಸೃಷ್ಟಿಕರ್ತನ ಜ್ಞಾನವನ್ನು ಅರಿಯದೆ ಮರೆತುಬಿಟ್ಟಿದ್ದಾರೆ!!**

ಆದ್ದರಿಂದ ದೇವರ ರಾಜ್ಯದಲ್ಲಿ ಅವರ "ತಿಳುವಳಿಕೆಯ ಕಣ್ಣುಗಳು" **ತೆರೆಯುವವು** ಎಂದು ಕೆಳಗಿನ ವಾಕ್ಯದಲ್ಲಿ ಬರೆದಿರುವದನ್ನು ನೋಡುತ್ತೇವೆ –

**ಕೀರ್ತನೆಗಳು 22:27**


"ಭೂಮಂಡಲದವರೆಲ್ಲರು ಎಚ್ಚರಗೊಂಡು ಯೆಹೋವನ ಕಡೆಗೆ ತಿರುಗಿಕೊಳ್ಳುವರು....."

ಆದ್ದರಿಂದ, ಸಾಮಾನ್ಯವಾಗಿ ಎಲ್ಲಾ ಮನುಷ್ಯಜಾತಿಯು ಅವರ ದೃಷ್ಟಿಯನ್ನು

ಕಳೆದುಕೊಂಡು ತಮ್ಮ ದೇವರು ಮತ್ತು ಸೃಷ್ಟಿಕರ್ತನನ್ನು ಮರೆತುಬಿಟ್ಟಿದ್ದಾರೆ!

ಆದರೆ ಕೆಲವರನ್ನು ಮಾತ್ರ ಹೊರತುಪಡಿಸಲಾಗಿದೆ (**exception**)!!

ಆದರೆ ಇವರೂ ಸಹ ಸಾಧಾರಣವಾದ ವ್ಯಕ್ತಿಗಳೇ ಆಗಿದ್ದಾರೆ!!



ಆಗ ಹನೋಕ ಮತ್ತು ನೋಹ ಮತ್ತು ಅಬ್ರಹಾಮನು ಮತ್ತು ಇಸಾಕನು ಮತ್ತು ಯಾಕೋಬನು ಮತ್ತು ಯೋಬನು ಎಂಬವರಿದ್ದರು.

ಇವರೆಲ್ಲರಿಗೂ ದೇವರ ಬಗ್ಗೆ ಜ್ಞಾನವಿತ್ತು ಮತ್ತು ದೇವರನ್ನು ಪ್ರಾರ್ಥಿಸುತ್ತಿದ್ದರು!!

ಯಾಕೋಬನ ಮರಣದ ನಂತರ, ದೇವರು ಯಾಕೋಬನ ಮಕ್ಕಳಿಗೆ ಹೀಗೆಂದನು –

**ಆಮೋಸನು 3:2**

**"ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತು ಕೊಂಡಿದ್ದೇನೆ...."**



ಹೌದು! ನಂತರ ದೇವರು ಕೆಲವು **ವ್ಯಕ್ತಿಗಳನ್ನು ಗುರುತಿಸಿ ಸಂಭಾಷನೆ** ಮಾಡುವದು ಮಾತ್ರವಲ್ಲದೆ **ಇಡೀ ಇಸ್ರಾಯೇಲ್ ದೇಶದೊಂದಿಗೆ ಸಂಭಾಷಿಸಿದನು!**

ದೇವರು **ಒಡಂಬಡಿಕೆಯ** ಮೂಲಕ ಅವರನ್ನು **ಗುರುತಿಸಿದನು** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ವಿಮೋಚನಾಕಾಂಡ 19:5**

**"ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ**



ಸ್ವಕೀಯಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ."

ಹೌದು! ಈ **ನಿಬಂಧನೆಯ ಒಡಂಬಡಿಕೆಯನ್ನು** ಇಸ್ರಾಯೇಲ್ಯರಿಗೆ ಮೋಶೆಯನ ಮೂಲಕ ಸೀನಾಯಿ ಬೆಟ್ಟದಲ್ಲಿ ಕೊಡಲಾಯಿತು!

ಈ ವಿಶೇಷವಾದ **ಒಡಂಬಡಿಕೆಯ** ಸಂಬಂಧದಲ್ಲಿ ದೇವರು ಇಸ್ರಾಯೆಲ್ಯರಿಗೆ **ಆರೋನನ ಯಾಜಕತ್ವವನ್ನು** ದೇವರು ಮತ್ತು ಜನರ ನಡುವೆ ಸೇವೆಮಾಡಲು ಮತ್ತು **ಪಾಪನಿವಾರಣಾ ಬಲಿಯ ದಿನದಂದು** ಪ್ರತೀವರ್ಷ ಅವರ **ಪಾಪಗಳನ್ನು ನಿವಾರಣೆ** ಮಾಡಲು ಕೊಟ್ಟನು. ಇದನ್ನು ಕುರಿತು ನಾವು **ಯಾಜಕಕಾಂಡ ಪುಸ್ತಕದ 16ನೇ ಅಧಿಕಾರದಲ್ಲಿ** ದಾಖಲಾಗಿರುವದನ್ನು ನೋಡುತ್ತೇವೆ.

**ಆದ್ದರಿಂದ ಅವರು 'ಶುದ್ಧರಾಗಿ' ಮತ್ತು ದೇವರೊಂದಿಗಿನ ನಿಬಂಧನೆಯ ಒಡಂಬಡಿಕೆಯ ಸಂಬಂಧದಿಂದ ಇಸ್ರಾಯೇಲ್ ದೇಶವು ದೇವರೊಂದಿಗೆ ಪ್ರಾರ್ಥಿಸಲು ಹೋಗಬಹುದಾಗಿತ್ತು!**

ಅವರಿಗೆ **ಮಾತ್ರ** ಈ **ಜ್ಞಾನ** ಮತ್ತು **ಬಾಗ್ಯ** ಉಂಟಾಗಿತ್ತು!!



**ಈ ಕಾಲವನ್ನು – ಯೆಹೂದ್ಯರಯುಗ – ಎಂದು ಕರೆಯಲಾಗುತ್ತದೆ ಮತ್ತು ಇದು ಯಾಕೋಬನ ಮರಣದಿಂದ ಆರಂಭವಾಗಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೊದಲ ಬರುವಿಕೆಯವರೆಗೂ ವಿಸ್ತರಿಸಿದೆ.**

**ಕ್ರಿ.ಪೂ.1813 ರಿಂದ ಕ್ರಿ.ಶ.33ವರೆಗೆ**

ಆದ್ದರಿಂದ ನಾವು ಹೀಗೆ ಓದುತ್ತೇವೆ –

**ಯೋಹಾನ 4:22**

"ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ, ಆದದರಿಂದ ನಾವು ಅರಿತಿರುವದನ್ನೇ ಆರಾಧಿಸುವವರಾಗಿದ್ದೇವೆ."

ಈ ಮಾತುಗಳು ಯೇಸು ಕ್ರಿಸ್ತನು ಬಾವಿಯ ಬಳಿಯಿದ್ದ ಸಮಾರ್ಯದ ಹೆಂಗಸಿನ ಸಂಗಡ ಹೇಳಿದನು!

ಯೇಸು ಈ ಮಾತನ್ನು "**ಯೂದಾಯ**" ಜನರು ಎಂದು ಕರೆಯಲ್ಪಡುವ "**ಯೆಹೂದ್ಯ**"ರ ಪರವಾಗಿ ಮಾತನಡಿದನು.

ಯೆಹೂದ್ಯರು ತಾವು ಆರಾಧಿಸುವ ದೇವರನ್ನು ಅರಿತಿರುವವರೆಂದು ಯೇಸು ಹೇಳುವುದನ್ನು ಗಮನಿಸಿರಿ.

**ಆದರೆ ಈ "ಸಮಾರ್ಯದ" ಹೆಂಗಸು ಯಾರು?**

ಆಕೆ ಹೇಳಿದ ಮಾತನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



## ಯೋಹಾನ 4:25

"ಆ ಹೆಂಗಸು ಆತನಿಗೆ - ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು ಎಂದು ಹೇಳಲು..."

**ಆಕೆಯು ಮೆಸ್ಸೀಯನಿಗಾಗಿ ಎದುರುನೋಡುತ್ತಿದ್ದಳು! ಅದು ಹೇಗೆ?!**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## ಯೋಹಾನ 4:12

"ನಮ್ಮ ಹಿರಿಯನಾದ ಯಾಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ ಬಾವಿಯನ್ನು ನಮಗೆ ಕೊಟ್ಟವನು."

ಹೌದು! ಈ ಸಮಾರ್ಯದ ಹೆಂಗಸು ಯಾಕೋಬನನ್ನು ತನ್ನ "ಹಿರಿಯ"ನೆಂದು ಹಕ್ಕು ಸಾಧಿಸುತ್ತಾಳೆ!

## ಅದು ಹೇಗೆ ಸಾಧ್ಯಾ?

ಹೌದು! ಈ ಸಮಾರ್ಯದ ಹೆಂಗಸು ಸಹ ಇಸ್ರಾಯೇಲ್ಯದವಳಾಗಿದ್ದಾಳೆ **ಆದರೆ** 10 **ಗೋತ್ರವಾಗಿ ಬೇರ್ಪಟ್ಟ ಇಸ್ರಾಯೇಲಿನ ರಾಜಧಾನಿಯು** ಈ ಸಮಾರ್ಯ ಪಟ್ಟನವಾಗಿದೆ!

ಅವರು ದೇವರನ್ನು ಆರಾಧಿಸುತ್ತಿದ್ದರೂ ಅಧಿಕವಾದ ಜ್ಞಾನವಿಲ್ಲದೆ ಧಾರ್ಮಿಕವಾಗಿ ಕುರುಡುತನದಿಂದ ಆರಾಧಿಸುತ್ತಿದ್ದರು.

ಅವರು ಬಹುಶಃ ಅನ್ಯಜನರಂತೆ ಆಗಿಬಿಟ್ಟಿದ್ದರು.

ಯೆಹೂದ್ಯ ಯುಗದ ಅಂತ್ಯದಲ್ಲಿ **ಇಸ್ರಾಯೇಲು** ಎರಡು ಭಾಗವಾಯಿತು

– **ಯೂದಾ (ಯೆಹೂದ್ಯ) ದೇಶ** ಮತ್ತು **ಇಸ್ರಾಯೇಲ್ ದೇಶ**

ದೇವರ ಆಶೀರ್ವಾದಗಳು ಮತ್ತು ದಯೆಯು ಯೆಹೂದ್ಯ ಜನರ ಮೇಲಿತ್ತು.

ಐಶ್ವರ್ಯವಂತ ಮತ್ತು ಲಾಜರನ ಸಾಮ್ಯರೂಪದಲ್ಲಿ ಯೆಹೂದ್ಯರನ್ನು "ಐಶ್ವರ್ಯವಂತನಿಗೆ" ಹೋಲಿಸಲಾಗಿದೆ!!

ಆದರೆ ಬಹುಬೇಗನೆ, ಯೆಹೂದ್ಯರ ಯುಗವು ಅಂತ್ಯವಾಯಿತೆಂದು ಯೇಸು ಹೇಳಿರುವ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ಮತ್ತಾಯ 23:37,38

**“ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ.”**

ಈ ವಾಕ್ಯಗಳನ್ನು ಯೇಸು ತಾನು **ಸಾಯುವ** ಸ್ವಲ್ಪ ಸಮಯಕ್ಕೆ ಮುಂಚೆ ಅಂದರೆ ಕ್ರಿ.ಶ.33ರಲ್ಲಿ ಹೇಳಿದನು!!


ಅದೇ ವರ್ಷದಲ್ಲಿ ಸುಮಾರು 8–10 ವಾರಗಳ ನಂತರ ದೇವರ ಯೋಜನೆಯಂತೆ **ಪಂಚಶತ್ತಮದ** ದಿನದಲ್ಲಿ ಒಂದು **ಹೊಸ** ಯುಗ **ಆರಂಭವಾಯಿತು.**

**.....ಮತ್ತು ದೇವರನ್ನು ತಿಳಿಯಲು ಮತ್ತು ದೇವರೊಂದಿಗೆ ಸಂಬಂಧ ಹೊಂದಲು ಇದ್ದ ಶರತ್ತುಗಳು ಬದಲಾದವು!!**

ಆ ಹೊಸ "**ನಿಬಂಧನೆಗಳು**" ಏನೆಂಬುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 14:6**

**"ನಾನೇ ಮಾರ್ಗವೂ..... ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ."**



**ಹೌದು! ದೇವರ ಬಳಿಗೆ ಹೋಗಲು ಒಂದೇ ಮಾರ್ಗವೆಂದರೆ ಅದು ಯೇಸು.**

ಯೆಹೂದ್ಯರು ದೇವರೊಂದಿಗೆ ಸಂಬಂಧವನ್ನು ಮುಂದುವರಿಸಬೇಕಾದರೆ ಆತನನ್ನು (ಯೇಸುವನ್ನು) ಅಂಗೀಕರಿಸಿ ಆತನಲ್ಲಿ ನಂಬಿಕೆಯಿಡಬೇಕಾಯಿತು –

**ಅಬ್ರಹಾಮನ ಮತ್ತು ಇಸಾಕನ ಮತ್ತು ಯಾಕೋಬನ ದೇವರು!**

ಅಲ್ಲಿಯವರೆಗೂ ಅವರು ಮಾಡಿದಂತೆ ದೇವರ ಬಳಿಗೆ ನೇರವಾಗಿ ಹೋಗಲು ಇನ್ನು ಮುಂದೆ ಸಾಧ್ಯವಿಲ್ಲ.

ಅವರು ಈಗ "ಮಾರ್ಗ"ವಾದ ಯೇಸುವನ್ನು ಒಪ್ಪಿಕೊಂಡು ಆತನ ಮೂಲಕ ದೇವರ ಬಳಿಗೆ ಹೋಗಬೇಕು.



ಆದರೆ ಅನೇಕರು ಈ "ಮಾರ್ಗ"ವನ್ನು ನಿರಾಕರಿಸಿದರು ಮತ್ತು ದೇವರ ದಯೆ ಮತ್ತು ಐಕ್ಯತೆಯಿಂದ ತುಂಡರಿಸಲ್ಪಟ್ಟರು ಎಂದು ಸೂಚಿಸುವದಕ್ಕೆ "ಐಶ್ವರ್ಯವಂತ ಮತ್ತು ಲಾಜರನು" ಎಂಬ ಸಾಮ್ಯರೂಪದಲ್ಲಿ ಒಂದು ದೊಡ್ಡ "ಡೊಂಗರ" ಸ್ಥಾಪಿತವಾಗಿದೆಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ 16:26**

**"ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ."**

ಆದರೂ ಕೆಲವರು ಮಾತ್ರ ನಂಬಿ ಈ ದೇವರ ವಿಶೇಷವಾದ ದಯೆಯಲ್ಲಿ ಪ್ರವೇಶಿಸಿದರು –

**ಕ್ರಿಸ್ತೀಯ ಆಶೀರ್ವಾದ,**

ಈ ದಯೆ ಮತ್ತು "ಕರೆಯುವಿಕೆ"ಯು ನಂತರ ಯೆಹೂದ್ಯರಲ್ಲದ – ಅನ್ಯಜನರಿಗೂ ವಿಸ್ತರಿಸಲ್ಪಟ್ಟಿತ್ತು!


ಇದರ ವಿವರಗಳನ್ನು ಸ್ಪಷ್ಟವಾಗಿ ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಅಪೊಸ್ತಲರ ಕೃತ್ಯಗಳು 10:1-2/45

"ಕೈಸರೈಯದಲ್ಲಿ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು. ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು."

"ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು."

**ಹೌದು! ಕೊರ್ನೇಲ್ಯನು ಮತ್ತು ಆತನ ಕುಟುಂಬದವರು ಅನ್ಯಜನರಾಗಿದ್ದು ಮೊದಲ ಸಲ (ಕ್ರೈಸ್ತರಾಗಿ) ಅಂಗೀಕರಿಸಲ್ಪಟ್ಟವರು!!**



**ಎಲ್ಲಾ "ವಿಶ್ವಾಸಿ"ಗಳಿಗೆ ಯೇಸುವಿನ ಮೂಲಕ ದೇವರನ್ನು ಪ್ರಾರ್ಥಿಸುವ ಬಾಗ್ಯಹೊಂದಿದ್ದಾರೆ.**

ಆದರೆ "ವಿಶ್ವಾಸಿ"ಯ ಹಂತವು ಕ್ರೈಸ್ತನ "ಜೀವನದ ಹಾದಿ"ಯಲ್ಲಿ ಮೊದಲ ಹಂತವಾಗಿದೆ ಮತ್ತು ಆತ್ಮೀಕವಾಗಿ "ಹಸುಮಕ್ಕಳಂತೆ" ಆರಂಭದ ಹಂತದಲ್ಲಿದ್ದಾರೆ (1 ಪೇತ್ರ 2:2)!!

ಕ್ರೈಸ್ತ "ವಿಶ್ವಾಸಿಗಳ"ನ್ನು "ಕರೆಯಲ್ಪಟ್ಟ"ರುವದು ಆತನ "ಹಿಂಭಾಲಕ"ರಾಗುವದಕ್ಕಾಗಿ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### 1 ಪೇತ್ರನು 2:21

"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು."

ಆದರೆ ಕ್ರೈಸ್ತರಲ್ಲಿ ಕೆಲವರು ಮಾತ್ರ ಈ ವಿಷಯವನ್ನು ಅರ್ಥಮಾಡಿಕೊಂಡಿದ್ದಾರೆ!



**ಮತ್ತಾಯ 22:14**


"…..ಹೀಗೆ ಕರೆಯಲ್ಪಟ್ಟವರು ಬಹು ಜನ,
ಆಗಿದ್ದುಆಯಲ್ಪಟ್ಟವರು ಸ್ವಲ್ಪ ಜನ ಅಂದನು."
(ಎನ್.ಐ.ವಿ.)

**ಈ ಹಿಂಭಾಲಕರಿಗಾಗಿಯೇ ಈ ಸುವಾರ್ತಾಯುಗದಲ್ಲಿ ಪ್ರಾರ್ಥಿಸುವ ಭಾಗ್ಯವನ್ನು ಕೊಡಲಾಗಿದೆ!**

ಇದನ್ನು ಕುರಿತು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಇಬ್ರಿಯರಿಗೆ 4:16**

"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸುಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ."



ಇಲ್ಲಿ "ನಾವು" ಎಂದರೆ "ಹಿಂಭಾಲಕರ" ವರ್ಗವನ್ನು ಸೂಚಿಸುತ್ತದೆ. ಇವರಿಗೆ ಯಜಮಾನನ ಹೆಜ್ಜೆಜಾಡಿನಲ್ಲಿ ನಡೆದು ಪ್ರಾರ್ಥಿಸುವ ಭಾಗ್ಯವನ್ನು ಹೊಂದಿದ್ದಾರೆ….!!

ಅವರು ಪ್ರಾರ್ಥನೆ ಮಾಡುವ ಕಾರಣವನ್ನು ಕುರಿತು ಗಮನಿಸಿ –

"ಕರುಣೆ" – ಅವರ ಪಾಪಕ್ಷಮಾಪನೆಗಾಗಿ ಮತ್ತು ನೀತಿಯ ವಸ್ತ್ರವನ್ನು ಶುದ್ಧಮಾಡುವದಕ್ಕಾಗಿ (ಯೆಶಾಯ 61:10)

"**ದಯೆಯಿಂದ ಸಹಾಯ**" – ಕ್ರಿಸ್ತೀಯ ಜೀವನದ ಹಾದಿಯಲ್ಲಿ ಬರುವ ಶೋಧನೆಗಳು ಮತ್ತು ಉಪದ್ರವಗಳನ್ನು ಸಹಿಸಿಕೊಳ್ಳಲು ಬೇಕಾದ ಆತ್ಮೀಕ ಬಲ (ಶಕ್ತಿ).

**ಹೌದು! ಇಕ್ಕಟ್ಟಾದ ದಾರಿಯಲ್ಲಿ ಪ್ರಗತಿಹೊಂದಲು "ಪ್ರತಿದಿನ" ಮತ್ತು "ಪ್ರತಿಗಂಟೆ"ಯೂ ಸಹ ಪ್ರಾರ್ಥನೆ ಬಹಳ ಮುಖ್ಯವಾಗಿದೆ!!**

ಆದರೆ ಅನೇಕ ಕ್ರೈಸ್ತರು ಕೇಳಿದ ಪ್ರಶ್ನೆಯನ್ನೇ ಯೇಸುವಿನ ಶಿಶ್ಯರು ಅನೇಕ ವರ್ಷಗಳ ಹಿಂದೆ ಕೇಳಿದರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ 11:1**

"....ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ - ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು ಎಂದು ಕೇಳಿದನು."

**ಹೌದು! ನಾವು ಹೇಗೆ ಪ್ರಾರ್ಥಿಸುತ್ತೇವೆ? ಅದೇ ಪ್ರಶ್ನೆ ನಿಮಗೂ ಇದೆಯಲ್ಲವೇ?**

ಇದಕ್ಕೆ ಉತ್ತರವಾಗಿ ನಮ್ಮ ಕರ್ತನು ಹೇಗೆ ಪ್ರಾರ್ಥಿಸಬೇಕೆಂದು ಪಾಠವನ್ನು ಹೇಳಿಕೊಡಲು ಪ್ರಾರಂಭಿಸುತ್ತಾನೆ –

**ಮತ್ತಾಯ 6:9**

"ಆದದರಿಂದ ನೀವು ಹೀಗೆ ಪ್ರಾರ್ಥನೆಮಾಡತಕ್ಕದ್ದು-"

ಹೌದು! ಇದು ನಮ್ಮ ಕರ್ತನು ಹೇಳುವ ಹಾಗೆ ಪ್ರಾರ್ಥನೆಗೆ ಒಂದು "ಕ್ರಮ" ಅಥವಾ ವಿಧಾನವಿದೆ!



ಈ ಪ್ರಾರ್ಥನೆಯನ್ನು ಮತ್ತೆ ಮತ್ತೆ ಹೇಳುವದಲ್ಲ ಆದರೆ ಪ್ರಾರ್ಥನೆಯ ಮುಖ್ಯ ಅಂಶ ಅಥವಾ ಪ್ರಾರ್ಥನೆಯ ಮಾದರಿಯಾಗಿದೆ.

ಕ್ರಿಸ್ತಯೇಸುವಿನಿಂದ ಪ್ರಾರ್ಥನೆಯನ್ನು ಹೇಗೆ ಮಾಡಬೇಕೆಂಬುದನ್ನು ಕೇಳೋಣ. ಬನ್ನಿ ಆರಂಭಿಸೋಣ –

1.

**ಮತ್ತಾಯ 6:9**


**"ಪರಲೋಕದಲ್ಲಿರುವ ನಮ್ಮ ತಂದೆಯೇ.............."**

ಹೌದು! ಎಲ್ಲಾ ಪ್ರಾರ್ಥನೆಗಳಿಗಿಂತ ಮೊದಲು "ತಂದೆ"ಯನ್ನು ಕುರಿತು ಸರಿಯಾಗಿ ಸಂಬೋಧಿಸಬೇಕು (ಭಾಷಣಮಾಡಬೇಕು).

ಏಕೆಂದರೆ ತಂದೆಯನ್ನು ಕುರಿತು ಯೇಸು ಹೀಗೆ ಹೇಳುತ್ತಾನೆ –

**ಯೋಹಾನ 17:3**

**"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ......"**



ಹೌದು! ಮತ್ತು ಅಪೋಸ್ತಲನಾದ ಪೌಲನು ನಮಗೆ ಮತ್ತೆ ಅದನ್ನೇ ಬೋಧಿಸುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 8:6**

**"ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ...."**

ಈ ದಿನಗಳಲ್ಲಿ ಅನೇಕ ಕ್ರೈಸ್ತರು ಈ "ಮಹಾಸತ್ಯದ" ದೃಷ್ಟಿಯನ್ನು ಕಳೆದುಕೊಂಡಿದ್ದಾರೆ ಮತ್ತು ಅವರ ಪ್ರಾರ್ಥನೆಗಳಲ್ಲಿ ಯೇಸು ಸ್ವಾಮಿಯೇ ತಂದೆಯೆಂದು ತಿಳಿದುಕೊಂಡು ಸಂಬೋಧಿಸುತ್ತಾರೆ!



ದೇವರನ್ನು ಅರಿತುಕೊಳ್ಳುವದು ಮತ್ತು ಆತನನ್ನು "ತಂದೆ" ಎಂದು ಕರೆಯುವದು ಒಂದು ಭಾಗ್ಯವಾಗಿದೆ.

ಏಕೆಂದರೆ ಯೆಹೂದ್ಯರಿಗೆ ಈ ಬಾಗ್ಯವಿರಲಿಲ್ಲ ಮತ್ತು ದೇವರ "ಮಕ್ಕಳಾಗುವ" ಮಹಾಭಾಗ್ಯವನ್ನು ಯಾರಿಗೆ ಕೊಡಲಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


## ಯೋಹಾನ 1:12

**“ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು.”**

ಹೌದು! ಮತ್ತೆ ಅಪ್ರೋ.ಯೋಹಾನನು ಅದನ್ನೇ ಕುರಿತು ಹೀಗೆ ಬರೆಯುತ್ತಾನೆ –

## 1 ಯೋಹಾನ 3:1

**“ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ.”**



ಓಹ್! ನಾವು ಎಂತಹ ಆಶ್ಚರ್ಯಕರವಾದ ಭಾಗ್ಯವನ್ನು ಹೊಂದಿದ್ದೇವೆ!!

ಹೌದು! ಎಲ್ಲಾ ಪ್ರಾರ್ಥನೆಯೂ ಎಲ್ಲರ ತಂದೆ ಮತ್ತು ದೇವರಿಗೆ ಸಂಬೋಧಿಸ ಬೇಕು, (**ಎಫೆಸದವರಿಗೆ** 3:14,15)

ಯೇಸುವಿನ ಸ್ವಂತ ಉದಾಹರಣೆಯನ್ನು ಈ ಕೆಳಗಿನ ಪ್ರಾರ್ಥನೆಯಲ್ಲಿ ಗಮನಿಸಿರಿ –

## ಯೋಹಾನ 17:1

**“ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನೆಂದರೆ – ತಂದೆಯೇ, ಕಾಲ ಬಂದದೆ.....”**

ಮತ್ತು ಇದಾದನಂತರ ಮುಂದಿನ ಪಾಠ ಏನೆಂದರೆ –

## 2.

## ಮತ್ತಾಯ 6:9

**“.....ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ....."**

ಹೌದು! ಎಲ್ಲಾ ಸೃಷ್ಟಿಯ ಮತ್ತು ಇಡೀ ವಿಶ್ವದ ತಂದೆಯಾದ ದೇವರನ್ನು ಸಂಬೋಧಿಸಿದ ನಂತರ ಆತನನ್ನು ಸ್ತುತಿಸಿಬೇಕು ಮತ್ತು ಆರಾಧಿಸಬೇಕು.

ದೇವರನ್ನು ಸ್ತುತಿಸುವದಕ್ಕೆ ಅನೇಕ ವಿಷಯಗಳಿವೆ.

ಹೌದು! ಆತನು ನ್ಯಾಯನೀತಿ, ಜ್ಞಾನ, ಶಕ್ತಿ ಮತ್ತು ಪ್ರೀತಿಯಲ್ಲಿ ಪರಿಪೂರ್ಣನಾಗಿರುವರು

ಮತ್ತು ಊಹಿಸಲು ಅಸಾಧ್ಯವಾದ ಆತನ ಮಹಿಮೆ –

"…..ಆತನು ಯಾರೂ ಹತ್ತಿರಕ್ಕೆ ಸೇರದ ಬೆಳಕಿನಲ್ಲಿ ವಾಸಮಾಡುವವನಾಗಿದ್ದಾನೆ……"

## ತಂದೆಯನ್ನು ಸಂಬೋಧಿಸಿ ಸ್ತುತಿಸುವ ಕೆಲವು ಉದಾಹರಣೆಗಳು -

**ಯೆಶಾಯನು 57:15 (ಯೆಶಾಯ)**

"ಸದಮಲನೆನಿಸಿಕೊಂಡು ಶಾಶ್ವತಲೋಕದಲ್ಲಿ ನಿತ್ಯನಿವಾಸಿಯಾದ ಮಹೋನ್ನತನು ಹೀಗನ್ನುತ್ತಾನೆ – ಉನ್ನತಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದು ಕೊಂಡು ದೀನನ ಆತ್ಮವನ್ನೂ ಜಜ್ಜಿಹೋದವನ ಮನಸ್ಸನ್ನೂ ಉಜ್ಜೀವಿಸುವವನಾಗಿದ್ದೇನೆ."

**ಎಫೆಸದವರಿಗೆ 1:17 (ಅಪೋ. ಪೌಲನು)**

"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ."

**ಯಾಕೋಬ 1:17 (ಅಪೋ.ಯಾಕೋಬನು)**

"ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ತಿಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ."

**ಕೀರ್ತನೆ 145:2,3 (ಅರಸನಾದ ದಾವೀದನು)**

"ದಿನಂಪ್ರತಿ ನಿನ್ನನ್ನು ಕೀರ್ತಿಸುವೆನು; ನಿನ್ನ ನಾಮವನ್ನು ಯುಗಯುಗಾಂತರಗಳಲ್ಲಿಯೂ ಸ್ತುತಿಸುವೆನು. ಯೆಹೋವನು ಮಹೋನ್ನತನೂ ಮಹಾಸ್ತುತಿ ಪಾತ್ರನೂ ಆಗಿದ್ದಾನೆ; ಆತನ ಮಹತ್ತು ಅಪಾರವಾದದ್ದು."

**ನೆಹೆಮಿಯ 9:6 (ನೆಹೆಮಿಯನು)**

"ನೀನೊಬ್ಬನೇ ದೇವರು; ನೀನು ಉನ್ನತೋನ್ನತವಾದ ಆಕಾಶವನ್ನೂ ಅದರ ಸೈನ್ಯವನ್ನೂ ಭೂಮಿಯನ್ನೂ ಅದರ ಮೇಲಿರುವದನ್ನೂ ಸಮುದ್ರಗಳನ್ನೂ ಎಲ್ಲಾ ಜಲಚರಗಳನ್ನೂ ಉಂಟುಮಾಡಿ ಸಮಸ್ತಪ್ರಾಣಿಗಳ ಜೀವಾಧಾರನಾಗಿರುತ್ತೀ. ಆಕಾಶಸೈನ್ಯದವರು ನಿನಗೆ ಅಡ್ಡಬೀಳುತ್ತಾರೆ."

**1 ಸಮುವೇಲನು 2:2 (ಹನ್ನಳು)**

"ಯೆಹೋವನಂಥ ಪರಿಶುದ್ಧನು ಇಲ್ಲವೇ ಇಲ್ಲ; ನಿನ್ನ ಹೊರತು ದೇವರು ಯಾರು? ನಮ್ಮ ದೇವರೇ ಅಸಮಾನವಾದ ಆಶ್ರಯದುರ್ಗವು."

ಹೌದು! ಒಬ್ಬ ವ್ಯಕ್ತಿಯೂ ಹೀಗೆ ಹೊಗಳುತ್ತಲೇ ಇರಬಹುದು.....ಇದರ ಪಟ್ಟಿಗೆ ಕೊನೆಯೇ ಇಲ್ಲ!


ಮತ್ತು ತಂದೆಯಾದ ದೇವರನ್ನು ಸ್ತುತಿಸಿ ಆರಾಧಿಸಿದ ಮೇಲೆ ಮುಂದಿನ ಪಾಠವೇನೆಂದರೆ –

## 3.

### ಮತ್ತಾಯ 6:10

**"ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ."**


ನಮ್ಮ ಮನಸ್ಸಿಗೆ ಬರಬೇಕಾದ ಮುಂದಿನ (ನಂತರದ) ಯೋಚನೆ ಏನೆಂದರೆ ಮನ್ಯುಷ್ಯರಿಗಾಗಿ ಇರುವ ದೇವರ ಮಹಿಮೆಯುಳ್ಳ ದೈವೀಕ ಯೋಜನೆ ಮತ್ತು ರಾಜ್ಯದ ಸುವಾರ್ತೆ.



ಆ "ಬರಬೇಕಾದ" ರಾಜ್ಯವು ಇನ್ನು (ಶಿಶುವಿನ) ಭ್ರೂಣದ ಆರಂಭದ ಅವಸ್ಥೆಯಲ್ಲಿದೆ ಎಂದು ಗುರುತಿಸುತ್ತೇವೆ –

ಸಭೆಯು ಇನ್ನೂ ಬೆಳೆಯುತ್ತಿರುವ ವಿಧಾನದಲ್ಲಿದೆ –

ಆದ್ದರಿಂದಲೇ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –



### ಕೊಲೊಸ್ಸಿಯವರಿಗೆ 1:13

**"ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು."**

ಹೌದು! "ರಾಜಾದಿರಾಜನೂ ಕರ್ತಾದಿ ಕರ್ತನೂ" ಆಗಿರುವ ಯೇಸುವಿನ ಆಳ್ವಿಕೆಯಡಿಯಲ್ಲಿರುವ ದೇವರ ರಾಜ್ಯದ ಕಣ್ಣಿಗೆಕಾಣದ ಆತ್ಮೀಕ ಅವಸ್ಥೆಯಲ್ಲಿ ಸಭೆಯು ಆಯ್ಕೆಯಾಗಿದೆ.

ಆದ್ದರಿಂದ ಸಭೆಯ ಅಂಗಗಳ ಪ್ರಾರ್ಥನೆ ಮತ್ತು ಅವರ ಬೆಳವಣಿಗೆ ಮತ್ತು ಸುಗ್ಗಿಯ ಕೆಲಸಗಳಲ್ಲಿರುವ ಪ್ರಾರ್ಥನೆ ಏನೆಂದರೆ –

"ನಿನ್ನ ರಾಜ್ಯವು ಬರಲಿ,...."

**ಹೌದು! ಯೇಸುಕ್ರಿಸ್ತನು ಎರಡನೇ ಬರುವಿಕೆಯಲ್ಲಿ ತನ್ನ ರಾಜ್ಯಭಾರವನ್ನು ಭೂಮಿಯಲ್ಲಿ ಸ್ಥಾಪಿಸುವುದರ ಮೂಲಕ ಈ ವಚನವು ನೆರವೇರುತ್ತದೆ.**

**"ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ."**

ಈಗ ನಾವು ನಾಲ್ಕನೆಯ ಪಾಠವನ್ನು ಕುರಿತು ನೋಡೋಣ –

## 4. ಮತ್ತಾಯ 6:11

**"ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು."**

ಅನೇಕರ ಈ ವಿಜ್ಞಾಪನೆಯನ್ನು ಬದುಕುವುದಕ್ಕಾಗಿ ಬೇಕಾದ ನಿಜವಾದ ಆಹಾರಕ್ಕಾಗಿ ಎಂದು ತಪ್ಪಾಗಿ ತಿಳಿದುಕೊಂಡಿದ್ದಾರೆ.

ಆದರೆ ಈ ವಿಷಯದಲ್ಲಿ ನಮ್ಮ ಯಜಮಾನನ ಆಜ್ಞೆಗಳನ್ನು ಗಮನಿಸಿರಿ –



### ಮತ್ತಾಯ 6:8

**"ಆದದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬದು ಆತನಿಗೆ ತಿಳಿದದೆ."**

**(ದಯವಿಟ್ಟು ಮತ್ತಾಯ 6:31, 32 ಅನ್ನು ಸಹ ಓದಿರಿ)**

ಹೌದು! ನಮ್ಮ ಎಲ್ಲಾ ತಾತ್ಕಾಲಿಕ ಅಗತ್ಯಗಳಾದ ಆಹಾರ, ಬಟ್ಟೆ ಮತ್ತು ವಸತಿಗಾಗಿ ನಮ್ಮ ದೇವರ ಮೇಲೆ ನಂಬಿಕೆಯಿಡಬೇಕು.



ಏಕೆಂದರೆ ದೇವರ ವಾಕ್ಯವು ಹೀಗೆ ಬರೆದಿದೆ –

**ಇಬ್ರಿಯರಿಗೆ 13:5**

"**ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ.**"

ಹೌದು! ಸ್ವತಃ ಕರ್ತನಾದ ದೇವರಿಂದ ಎಂತಹ ಅದ್ಭುತವಾದ ಭರವಸೆಯ ಮಾತಾಗಿದೆ!

**ಹಾಗಾದರೆ 'ಅನುದಿನದ ಆಹಾರ'ವೆಂದು ಇಲ್ಲಿ ಏನ್ನನ್ನು ಸೂಚಿಸುತ್ತದೆ?**


ಇದು ಆತ್ಮೀಕ "ಆಹಾರ"ವಾದ ದೇವರ ವಾಕ್ಯವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಯೆರೆಮೀಯ 15:16**

**"ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು."**

ಹೌದು! ಆತ್ಮೀಕ ಬೆಳವಣಿಗೆಗೆ ಮತ್ತು ಜೀವನಕ್ಕಾಗಿ ಪ್ರತಿದಿನವೂ ಸಭೆಗೆ ದೇವರ ವಾಕ್ಯಗಳ ಮಾರ್ಗದರ್ಶನವು ಅಗತ್ಯವಾಗಿದೆ.



ಈ "ಅನುದಿನದ ಆಹಾರ"ವು ಪ್ರತಿದಿನವೂ ದೇವರ ಪವಿತ್ರಾತ್ಮವನ್ನು ಹುಡುಕುವದನ್ನೂ ಸಹ ಸೂಚಿಸುತ್ತದೆ ಎಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ 11:11-13**

"**.....ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವವನಲ್ಲವೇ ಅಂದನು.**"

ಹೌದು! ದೇವರ ವಾಕ್ಯವೆಂಬ "ದೀಪ"ದಿಂದ "ಬೆಳಕು" ಬರಲು ಹೇಗೆ "ಎಣ್ಣೆ" ಕಾರಣವೋ ಹಾಗೆಯೇ ಪ್ರತಿದಿನವೂ ಪವಿತ್ರಾತ್ಮಕ್ಕಾಗಿ ಬೇಡಿಕೊಳ್ಳಬೇಕಾಗಿದೆ.

**ದಯವಿಟ್ಟು ಗಮನಿಸಿ :- "ನಮ್ಮ" ಮತ್ತು "ದಯಪಾಲಿಸು" ಎಂಬ ವಾಕ್ಯವು (ಮತ್ತಾಯ 6:11) ಸ್ಪಷ್ಟವಾಗಿ ನಮಗೆ ಸಲಹೆ ನೀಡುವದೇನೆಂದರೆ ಪ್ರಾರ್ಥನೆ ಎಂಬುದು ತನಗಾಗಿ ಮಾತ್ರವಲ್ಲದೆ ಒಂದೇ ಕುಟುಂಬವೆಂಬ ಕ್ರಿಸ್ತನ ಇಡೀ ಶರೀರದ ಒಳಿತು ಮತ್ತು ಅವಶ್ಯಕತೆಯನ್ನು ಪೂರೈಸುವದಕ್ಕಾಗಿಯದೆ!**

ಈಗ ನಾವು ಪ್ರಾರ್ಥನೆಯ ಐದನೆಯ ಪಾಠವನ್ನು ಕುರಿತು ನೋಡುತ್ತೇವೆ –

## 5. ಮತ್ತಾಯ 6:12

**"...ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು..."**

**ಈ 'ತಪ್ಪುಗಳನ್ನು' ಎಂದರೇನು?**

ಅವು ನಮ್ಮ ಪಾಪಗಳನ್ನು ಸೂಚಿಸುತ್ತದೆ!

ಆದ್ದರಿಂದ ಇದು ನಮ್ಮ ಪಾಪಗಳನ್ನು ಅರಿಕೆಮಾಡುವದು ಮತ್ತು ಅದರ ಕ್ಷಮಾಪನೆಗಾಗಿ ಬೇಡುವದನ್ನು ಸೂಚಿಸುತ್ತದೆ.

ಇಬ್ರಿಯರಿಗೆ 6:4ರಲ್ಲಿ ಓದುವ ಪ್ರಕಾರ "ಪರಲೋಕದಿಂದಾದ ದಾನ"ವನ್ನು ಯೇಸುವಿನ ಬಲಿದಾನದ ಮೇಲೆ ನಂಬಿಕೆಯಿಡುವದರಿಂದ ನೀತಿವಂತರಾಗುತ್ತೇವೆ. ಆದ್ದರಿಂದ ಒಬ್ಬ ಕ್ರೈಸ್ತನು "ಧರ್ಮವೆಂಬ (ನೀತಿ) ನಿಲುವಂಗಿಯನ್ನು" ಧರಿಸಿಕೊಳ್ಳುವನು (ಯೆಶಾಯ 61:10).

ಆದರೆ "ಕಳಂಕವಿಲ್ಲದ" ನಿಲುವಂಗಿಯು ಇದಾದ ಮೇಲೆ ಮಾಡುವ ಪ್ರತಿಯೊಂದು ಪಾಪದಿಂದಲೂ "ಮಣ್ಣಾಗುತ್ತದೆ" (ಕಲೆಯಾಗುತ್ತದೆ)!!

ಈ "ಗುರುತುಗಳನ್ನು" ತೊಳೆಯಬೇಕು.

ಹೇಗೆ ಎಂದು ನೀವು ಕೇಳಬಹುದು?!


ಇದು ಹೇಗೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### 1 ಯೋಹಾನನು 1:9-10

**"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು."**

ಹೌದು! ಒಬ್ಬ ಕ್ರೈಸ್ತನು(ಳು) ತಾನು ಮಾಡಿದ ಪಾಪಗಳನ್ನು ಅರಿಕೆಮಾಡಿದರೆ ಆತನಿಗೆ (ಆಕೆಗೆ) ಪಾಪಕ್ಷಮಾಪನೆ ಯುಂತಾಗುತ್ತದೆ.

ಇದು ಪ್ರತಿದಿನ ಮಾತ್ರವಲ್ಲದೆ, ದಿನದಲ್ಲಿ ಅನೇಕ ಸಲ ಮಾಡಬೇಕು!



ಆದರೆ "ನಮ್ಮ ತಪ್ಪುಗಳನ್ನು ಕ್ಷಮಿಸುವಂತೆ" – ಪಾಪಗಳನ್ನು – ಬೇಡಿಕೊಳ್ಳುವದಕ್ಕೆ ಮೊದಲು ಕರ್ತನ ವಾಕ್ಯದಲ್ಲಿ ದಾಖಲಾಗಿರುವ ಒಂದು ನಿಯಮವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು –

### ಮತ್ತಾಯ 6:14,15

**"ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ."**

ಹೌದು! ನಮ್ಮ ಪಾಪಗಳನ್ನು ಕ್ಷಮಿಸುವದಕ್ಕೆ ಇದು ದೇವರ ನಿಬಂಧನೆಯಾಗಿದೆ – ನಮಗೆ ವಿರೋಧವಾಗಿ

➡ ಯಾರ್ಯಾರು ಪಾಪಗಳನ್ನು ಮಾಡಿದ್ದಾರೋ ಅವರನ್ನು ಕ್ಷಮಿಸಬೇಕು!!

## ನಿಜವಾಗಿಯೂ! ಎಂತಹ ಅದ್ಭುತವಾದ ನಿಯಮವಾಗಿದೆ!!!

ಆದರೆ ಇಲ್ಲಿ ದೇವರು ಸ್ಪಷ್ಟಪಡಿಸುವದೇನೆಂದರೆ ನಾವು ಎಷ್ಟು ಹೆಚ್ಚಾಗಿ ಪಾಪಗಳನ್ನು ಕ್ಷಮಿಸುವಂತೆ ಆತನಲ್ಲಿ ಬೇಡಿಕೊಳ್ಳುತ್ತೇವೋ – ಅಷ್ಟೇ ಹೆಚ್ಚಾಗಿ ನಾವು ಇತರರನ್ನು ಅವರು ನಮಗೆ ಮಾಡಿದ ತಪ್ಪುಗಳನ್ನು ಕ್ಷಮಿಸಬೇಕು.

ಇದನ್ನು ಸ್ವಲ್ಪಯೋಚಿಸಿ ನೋಡಿರಿ!

ಒಂದು ಕ್ಷಣ ನಿಮ್ಮ ಕಣ್ಣುಗಳನ್ನು ಮುಚ್ಚಿ ದೇವರು ಕ್ಷಮಿಸಬೇಕೆಂದಿರುವ ನಿಮ್ಮ ಎಲ್ಲಾ ಪಾಪಗಳನ್ನು ಕುರಿತು ಯೋಚಿಸಿರಿ ಮತ್ತು ನಂತರ ಇತರರು ನಿಮಗೆ ಮಾಡಿದ ಎಲ್ಲಾ ತಪ್ಪುಗಳು ಮತ್ತು ಪಾಪಗಳನು ಕ್ಷಮಿಸಲು ನಿಮಗೆ ಇರುವ ಆಯ್ಕೆಯನ್ನು ಕುರಿತು ಯೋಚಿಸಿರಿ!

ನೀವು ಕ್ಷಮಿಸುತ್ತೀರಾ?

ಸ್ವಲ್ಪ ಮಾತ್ರವೇ? ಅಥವಾ ಎಲ್ಲವನ್ನೂ ಕ್ಷಮಿಸುವಿರಾ!!

ಹಾಗಾದರೆ ನಿಮ್ಮ ಪಾಪಗಳೂ ಆ ಮಟ್ಟಕ್ಕೆ ದೇವರಿಂದ ಕ್ಷಮಾಪನೆಯನ್ನು ಹೊಂದುವಿರಿ!

ಊಹಿಸಿನೋಡಿ, ದೇವರ ಈ ನಿಯಮವನ್ನು ಕಾರ್ಯರೂಪದಲ್ಲಿ ತಂದರೆ ಎಷ್ಟೆ ಮಾನಸಿಕ ಉದ್ವೇಗ, ರಕ್ತದ ಒತ್ತಡದ ತೊಂದರೆಗಳು, ಹೃದಯಾಘಾತಗಳು, ಪಾರ್ಶ್ವವಾಯು ರೋಗಗಳನ್ನು ತಡೆಗಟ್ಟಬಹುದು!

ಈ ನಿಯಮವು ಒಬ್ಬವ್ಯಕ್ತಿಯ ಸಹಮನುಷ್ಯನೊಂದಿಗೆ "ಬಂಗಾರದ"ಂತಿರುವ ದಯೆಯುಳ್ಳ ಕೃಪೆಯನ್ನು ಬೆಳಸಿಕೊಳ್ಳಬಹುದು.

ಈಗ ನಾವು ಪ್ರಾರ್ಥನೆಯ ಆರನೆಯ ಪಾಠಕ್ಕೆ ತಲುಪಿದ್ದೇವೆ –

## 6.

### ಮತ್ತಾಯ 6:13

"ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು..."


ಈ ವಾಕ್ಯದಲ್ಲಿ ಎರಡು ಭಾಗಗಳಿವೆ ಮತ್ತು ಎರಡು ಆಲೋಚನೆಗಳಿವೆ.

ಮೊದಲ ಭಾಗದಿಂದ ಆರಂಭಿಸೋಣ

"…..ನಮ್ಮನ್ನು ಶೋಧನೆಯೊಳಗೆ ಸೇರಿಸದೆ….."

**ಇದರ ಅರ್ಥವೇನು?**

**ನಾವು ಶೋಧನೆಯೊಳಗೆ ಒಳಪಡಲೇಬಾರದು ಎಂದು ದೇವರಲ್ಲಿ ಪ್ರಾರ್ಥಿಸಬೇಕಾ??**



ಇಲ್ಲಿ "ಶೋಧನೆ" ಎಂಬ ಪದವು "ಪರೀಕ್ಷೆ" (ಅಥವಾ ಪರಿಶೋಧನೆ) ಎಂಬ ಅರ್ಥವನ್ನು ಕೊಡುತ್ತದೆ.

ಮತ್ತು "ಬಿಕ್ಕಟ್ಟಾದ ದಾರಿ"ಯಲ್ಲಿ ನಡೆಯುತ್ತಿರುವ ಒಬ್ಬ ಕ್ರೈಸ್ತನ(ಳ) ಬಗ್ಗೆ ನಾವು ಕೆಳಗಿನ ವಾಕ್ಯದಲ್ಲಿ ಏನನ್ನು ಓದುತ್ತೇವೆಂದು ನೋಡೋಣ –

**ಯಕೋಬನು 1:2**

**"ನನ್ನ ಸಹೋದರರೇ, ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ."**

"ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು."

ಮತ್ತೆ ಕೆಳಗಿನ ವಾಕ್ಯದಲ್ಲಿ ನಾವು ಹೀಗೆ ಓದುತ್ತೇವೆ –

**1 ಪೇತ್ರನು 4:12**

**"ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ."**

ಮತ್ತೆ ನಾವು ಹೀಗೆ ಓದುತ್ತೇವೆ –

**1 ಪೇತ್ರನು 1:6**

**"ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು**

**ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ, ಹರ್ಷಿಸುವವರಾಗಿದ್ದೀರಿ."**

ಹೌದು! ಇವೆಲ್ಲಾ ವಾಕ್ಯಗಳು "ಶೋಧನೆಗಳಲ್ಲಿ" ಹರ್ಷವುಳ್ಳವರಾಗಿ ಪ್ರವೇಶಿಸಬೇಕೆಂದು ಹೇಳುತ್ತದೆ!!

ಆದರೆ ಈ ವಿಷಯವನ್ನು ಆಳವಾಗಿ ಅರ್ಥಮಾಡಿಕೊಳ್ಳುವದಕ್ಕೆ ಮೊದಲು ನಾವು ಗಮನಿಸಬೇಕಾದದ್ದು ಏನೆಂದರೆ, ಯಾಕೋಬನು ಪುಸ್ತಕದ ಮೊದಲನೆಯ ಅಧಿಕಾರ (ಅಧ್ಯಯನ)ದಲ್ಲಿ "ಶೋಧನೆ" ಎಂಬುದಕ್ಕೆ ಎರಡು ಅರ್ಥಗಳು ಇರುವುದನ್ನು ನೋಡುತ್ತೇವೆ ಮತ್ತು ಅವೆರಡರ ಅರ್ಥಗಳಲ್ಲಿ ಬಹಳ ವ್ಯತ್ಯಾಸವಿದೆ!

ಆ ವಾಕ್ಯವನ್ನು ಕುರಿತು ಹೀಗ ನಾವು ನೋಡೋಣ –

**ಯಕೋಬನು 1:13**

**"ಯಾವನಾದರೂ ಪಾಪಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ – ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ."**

**ಇಲ್ಲಿ ಸೂಚಿಸಿರುವ "ಪ್ರೇರಣೆಯು" ಬಿದ್ದುಹೋದ ಮತ್ತು ದುಷ್ಟತನಕ್ಕೊಳಗಾದ ಶಾರೀರಿಕ ಇಚ್ಛೆ ಮತ್ತು ಪಾಪದ ಸುಖಾನುಭವದಿಂದ ಉಂಟಾಗುತ್ತದೆ.**




ಹೌದು! ಈ ರೀತಿಯಾದ "ಪ್ರೇರಣೆಯು" ದೇವರಿಂದ ಉಂಟಾಗುವದಿಲ್ಲ!!

ಆದರೆ ಒಬ್ಬ ಕ್ರೈಸ್ತನಿಗೆ(ಳಿಗೆ) ದೇವರಿಂದ ಬರುವ ಶೋಧನೆಯು ಯಾವುದೆಂದರೆ ಆ ಪರಿಶೋಧನೆಯ ಮೂಲಕ ಆತನ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುವದಕ್ಕಾಗಿ

ಮತ್ತು ತನ್ನ ನಂಬಿಕೆಯನ್ನು ನಿರೂಪಿಸುವದಕ್ಕಾಗಿ ಆಗಿದೆ.

ಈಗ ನಾವು ಮತ್ತೆ ವಾಕ್ಯದ ಕಡೆ ಗಮನ ಕೊಡೋಣ –

ಈ ವಾಕ್ಯವು "....ನಮ್ಮನ್ನು ಶೋಧನೆಯೊಳಗೆ ಸೇರಿಸದೆ....." ಎಂದು ಹೇಳುವಂತಿದೆ.

**ಇದು ನಿಜವೇ?**

**ದೇವರು ನಮಗೆ ಯಾವ ಶೋಧನೆಗೂ ಒಳಪಡಿಸಬಾರದೆಂದು ನಾವು ಪ್ರಾರ್ಥಿಸುತೇವೋ?**
**ಅಥವಾ....ಎಲ್ಲಾ ಶೋಧನೆಗಳನ್ನು ತೆಗೆದುಬಿಡಬೇಕೆಂದು ಪ್ರಾರ್ಥಿಸುತ್ತೇವೋ?**

**ಬಹಳ ನಿಶ್ಚಯವಾಗಿಯೂ ಇಲ್ಲ!!**

ಏಕೆಂದರೆ ಅಪೋಸ್ತಲನಾದ ಯಾಕೋಬನ ಪುಸ್ತಕದ 1ನೇ ಅಧ್ಯಾಯ ಮತ್ತು ವಾಕ್ಯ 2, 12ರಲ್ಲಿ ಹೇಳಿದ ವಾಕ್ಯಗಳನ್ನು ನೆನೆಪಿಸಿಕೊಳ್ಳಿರಿ.

ಅದೇನೆಂದರೆ, ನಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ಕೇವಲ ಆನಂದಕವಾದದ್ದು ಮತ್ತು ಬಹಳ ಆಶೀರ್ವಾದವಾದದ್ದು ಸಹ – ಏಕೆಂದರೆ ಆ ಪರಿಶೊಧನೆಗಳ ಮೂಲಕವೇ ಒಬ್ಬ ವ್ಯಕ್ತಿಯು "ಜೀವವೆಂಬ ಜಯಮಾಲೆಯನ್ನು" ಹೊಂದುವದಕ್ಕೆ ಯೋಗ್ಯನಾಗುತ್ತಾನೆ!!

**ಹಾಗಾದರೆ ಈ ವಾಕ್ಯದಲ್ಲಿ ಕೊಟ್ಟಿರುವ ವಿಷಯವೇನು?**

ಇಲ್ಲಿ ಶೋಧನೆಯೊಳಗೆ "ಸೇರಿಸದೆ" ಎಂಬುದರ ಬದಲಾಗಿ ಶೋಧನೆಯೊಳಗೆ ನಮ್ಮನ್ನು "ತೊರೆದುಬಿಡದೆ" (ಎಂದೆಂದಿಗೂ ಬಿಟ್ಟುಬಿಡದೆ) ಎಂದು ಭಾಷಾಂತರಿಸಿದ್ದರೆ ಚೆನ್ನಾಗಿರುತ್ತದೆ.

**".....ಶೋಧನೆಯೊಳಗೆ ನಮ್ಮನ್ನು ತೊರೆದುಬಿಡದೆ"**

ಇದು ಆ ಶೋಧನೆಗಳ ಸಮಯದಲ್ಲಿ ನಮ್ಮ ಕರ್ತನಿಂದ ವಾಗ್ದಾನ ಮಾಡಲ್ಪಟ್ಟ "ಕೃಪೆಯ ಸಹಾಯ"ವನ್ನು ಬೇಡಿಕೊಳ್ಳುವದನ್ನು ಸೂಚಿಸುತ್ತದೆ. ಈ ಬೆಲೆಯುಳ್ಳ ವಾಗ್ದಾನಗಳನ್ನು ಕುರಿತು ಆತನ ವಾಕ್ಯಗಳಲ್ಲಿ ಕಾಣಬಹುದು –

**ಇಬ್ರಿಯರಿಗೆ 13:5**

**"ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ."**

ಮತ್ತೆ ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಮತ್ತಾಯ 28:20**

**“ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು."**

ಹೌದು! ಇದು ಬಹಳ ಸ್ಪಷ್ಟವಾಗಿದೆಯಲ್ಲವೆ?

ಆದ್ದರಿಂದ ಅಪ್ರೋಸ್ತಲನಾದ ಪೌಲನು ತನ್ನ ಸಹ ಸಹೋದರ/ಸಹೋದರಿ ಕ್ರೈಸ್ತರಿಗೆ ತಮ್ಮ ಶೋಧನೆಗಳು ಮತ್ತು ಪರೀಕ್ಷೆಗಳ ಮಧ್ಯದಲ್ಲಿರುವಾಗ ಬೆರೆಯುವದೇನೆಂದರೆ –

**ಇಬ್ರಿಯರಿಗೆ 4:16**

**"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ."**

ಹೌದು! ಇದರಿಂದ ನಮಗೆ ಬಹಳ ಸ್ಪಷ್ಟವಾಗುವದೇನೆಂದರೆ ಪ್ರಾರ್ಥನೆ ಎಂದರೆ "ಶೋಧನೆಗಳನ್ನು” ತೆಗೆದುಹಾಕುವದು ಎಂದಲ್ಲ ಆದರೆ ಆ ಶೋಧನೆಗಳನ್ನು ಸಹಿಸಿ ಅದನ್ನು ಜಯಿಸಲು ಬಲವನ್ನು ಕೊಡು ಎಂದು ಕೇಳುವದೇ ಪ್ರಾರ್ಥನೆಯಾಗಿದೆ!!

**ಮತ್ತು ಈಗ ನಾವು ಈ ವಾಕ್ಯದ ಎರಡನೆಯ ಭಾಗಕ್ಕೆ ಬರೋಣ -**

**“.....ಕೇಡಿನಿಂದ ನಮ್ಮನ್ನು ತಪ್ಪಿಸು....”**

## ಇದರ ಅರ್ಥವೇನು?

ಇದು ನಮ್ಮೊಳಗಿರುವ ಕೆಟ್ಟತನವನ್ನು ಸೂಚಿಸುತ್ತದೆ –

ಹೌದು! ನಮ್ಮ ಶರೀರದಲ್ಲಿ ಬಲಹೀನತೆಗಲ್ಲಿರುವುದರಿಂದ ಕೆಡುಕನಾದ ಸೈತಾನನು ಯಾವಾಗಲೂ ಆ ಬಲಹೀನತೆಗಳನ್ನು ಹುರಿದುಂಬಿಸಲು (ಪ್ರೇರೇಪಿಸಲು) ಸಮಯವನ್ನು ಎದುರು ನೋಡುತ್ತಿರುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 26:41**

**"ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು ಎಂದು ಹೇಳಿದನು."**

ಇದು ನಮ್ಮ ಶರೀರ ಮತ್ತು ಮನಸ್ಸಿನಲ್ಲಿರುವ ಎಲ್ಲಾ ವಿಧವಾದ ಪಾಪಗಳು ಮತ್ತು ಬಲಹೀನತೆಗಳಿದ್ದು, ಇವುಗಳಿಂದ ನಮ್ಮ ಕರ್ತನು ಮಾತ್ರ ಬಿಡುಗಡೆ ಮಾಡಿ ನಮಗೆ ಜಯವನ್ನು ನೀಡುತ್ತಾನೆಂದು ಸೂಚಿಸುತ್ತದೆ!

ನಮ್ಮೆಲ್ಲರಿಗೂ ಅವರವರ ಪ್ರತ್ಯೇಕವಾದ ಬಲಹೀನತೆಗಳಿರುತ್ತವೆ ಎಂದು ನಮಗೆ ತಿಳಿದವೆ ಮತ್ತು ಅದರ ಮೇಲೆ ನಾವು
ಒಳ್ಳೆಯ ಹೋರಾಟವನ್ನು ಹೋರಾಡಬೇಕಾಗಿದೆ ಮತ್ತು ನಾವು –

"ನಾನಿರುವದೇ ಹೀಗೆ" ಎಂದು ಹೇಳಬಾರದು.

ಆಗ ಮಾತ್ರವೇ ಒಬ್ಬ ವ್ಯಕ್ತಿಗೆ ಅದರಿಂದ ಹೊರಬರಲು ಕರ್ತನಿಂದ ದಯೆ ದೊರಕುವದು!

**ಹೌದು! ಈ ಹೋರಾಟವು ಮರಣ ಪರ್ಯಂತರವಾಗಿದೆ!!**

**ಇಲ್ಲಿಯೂ ಸಹ "ನಾವು ಎಂಬ ಪದವು ಇರುವುದನ್ನು ನೋಡುತ್ತೇವೆ. ಇದರಿಂದ ನಾವು ಪ್ರಾರ್ಥಿಸುವಾಗ ನಮ್ಮ ಪ್ರಾರ್ಥನೆಗಳಲ್ಲಿ ಕ್ರಿಸ್ತನ ಶರೀರದ ಅಂಗಗಳಾಗಿರುವ ಇತರರೂ ಸಹ ಇದೇ ಸ್ಥಿತಿಯಲ್ಲಿರುತ್ತಾರೆಂಬ ಯೋಚನೆಯು ನಮಗಿರಬೇಕು.**

ಏಳನೆಯ ಮತ್ತು ಕೊನೆಯ ಬಹಳ ಮುಖ್ಯವಾದ ಪಾಠವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

7.

## ಕೊಲೊಸ್ಸಿಯವರಿಗೆ 3:17

**"ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ."**

ಹೌದು! ಎಲ್ಲಾ ಪ್ರಾರ್ಥನೆಯ ಸಮಾಪ್ತಿಯ ಆಲೋಚನೆಗಳಲ್ಲಿ ನಿಶ್ಚಯವಾಗಿಯೂ ತಂದೆಯ ಬಳಿಗೆ ಹೋಗಲು ಮತ್ತು ಪ್ರಾರ್ಥನೆಯಲ್ಲಿ "ಬೇಡಿಕೊಳ್ಳಲು" ನಮಗೆ ಮಹಾ ಭಾಗ್ಯವನ್ನು ತಂದುಕೊಟ್ಟಂತಹ ನಮ್ಮ ಯಜಮಾನನನ್ನು (ಯೇಸುವನ್ನು) ನೆನಸಿಕೊಳ್ಳಬೇಕೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 16:24**

**"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ಬೇಡಿಕೊಳ್ಳಿರಿ ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು."**



ಹೌದು! ಒಬ್ಬ ವ್ಯಕ್ತಿ ತಂದೆಯ ಬಳಿ ಹೋಗಬೇಕಾದರೆ, ಅದು ಮಗನ ಮುಖಾಂತರ ಮಾತ್ರ ಸಾಧ್ಯವಾಗುತ್ತದೆ.

ಏಕೆಂದರೆ ನಮ್ಮ ಕರ್ತನ ಈ ಕೆಳಗಿನ ವಾಕ್ಯವನ್ನು ಎಂದಿಗೂ ನಾವು ಮರೆಯಬಾರದು –

**ಯೋಹಾನ 15:5**

**"ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ."**

ಆದ್ದರಿಂದ ದೇವರಿಗೆ ಪ್ರಾರ್ಥಿಸುವಾಗ ಇರಬೇಕಾದ ಸಮಾಪ್ತಿಯ ಆಲೋಚನೆ ಏನೆಂದರೆ ದೇವರಿಗೆ ಮಗನೂ ಮತ್ತು ನಮ್ಮೆಲ್ಲರಿಗೆ ಮಹಾ ತಲೆಯೂ (ಎಫೆಸದವರಿಗೆ 1:22) ಆಗಿರುವಾತನನ್ನು ನೆನಸಿಕೊಳ್ಳಬೇಕು ಮತ್ತು ಅಂಗೀಕರಿಸಬೇಕು.

**ಇದು ಯುಕ್ತವಾದದ್ದೇನೆಂದರೆ ಒಬ್ಬ ಸಹೋದರ/ಸಹೋದರಿಯು ತನ್ನ ಪ್ರಾರ್ಥನೆಯ ಆರಂಭವನ್ನು ತಂದೆಯನ್ನು ನೋಡಿ ಪ್ರಾರ್ಥಿಸಬೇಕು ಮತ್ತು ಪ್ರಾರ್ಥನೆಯ ಸಮಾಪ್ತಿಯನ್ನು ಮಗನನ್ನು ನೋಡಿ ಮುಗಿಸಬೇಕು!**

**ಏಕೆಂದರೆ ಎಲ್ಲವೂ ತಂದೆಯಿಂದ ಉಂಟಾಗಿದೆ ಮತ್ತು ಅವೆಲ್ಲವೂ ಮಗನ ಮುಖಾಂತರವಾಗಿ ಉಂಟಾಗಿದೆಯಲ್ಲವೇ?**



ಕೊನೆಯದಾಗಿ, ನಾವು ಅಪೋಸ್ತಲನಾದ ಪೌಲನು ಥೆಸಲೋನಿಕದವರಿಗೆ ಬರೆದ ವಾಕ್ಯವನ್ನು ಕುರಿತು ನೋಡೋಣ –

**1 ಥೆಸಲೋನಿಕದವರಿಗೆ 5:17**

**"…..ಎಡೆಬಿಡದೆ ಪ್ರಾರ್ಥನೆ ಮಾಡಿರಿ….."**

**ಇದರ ಅರ್ಥವೇನು?**

ಅಂದರೆ ನಾವು ಹಗಲು ಮತ್ತು ರಾತ್ರಿ ಎಲ್ಲಾ ಸಮಯದಲ್ಲಿಯೂ ಪ್ರಾರ್ಥಿಸಬೇಕು ಮತ್ತು ಇತರ ಎಲ್ಲಾ ಕುಟುಂಬದ ಮತ್ತು ಕೆಲಸಗಳನ್ನು ಅಲಕ್ಷ್ಯಮಾಡಬೇಕೆಂದು ಅರ್ಥಾನಾ?

**ಖಂಡಿತವಾಗಿಯೂ ಇಲ್ಲ!!**

ನಮ್ಮ ಕುಟುಂಬದ ಮತ್ತು ಪ್ರೀತಿ ಪಾತ್ರರಿಗಾಗಿ ನಾವು ಮಾಡಬೇಕಾದ ಕರ್ತವ್ಯವನ್ನು ಕುರಿತು ಏನನ್ನು ಓದುತ್ತೇವೆ –

**1 ತಿಮೊಥೆಯನಿಗೆ 5:8**

**"ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ."**

ಹೌದು! ತನ್ನ ಕುಟುಂಬದ ಅವಶ್ಯಕತೆಗಳನ್ನು ಪೂರೈಸುವದು ಒಬ್ಬ ಕ್ರೈಸನ ಕರ್ತವ್ಯವಾಗಿದೆ.

ಹಾಗಾದರೆ ಇಲ್ಲಿ – **"ಎಡೆಬಿಡದೆ ಪ್ರಾರ್ಥನೆ ಮಾಡಿರಿ..."** ಎಂಬ ಆಲೋಚನೆ ಏನನ್ನು ಸೂಚಿಸುತ್ತದೆ?

ಇಲ್ಲಿರುವ ಅಲೋಚನೆ ಏನೆಂದರೆ ಒಬ್ಬ ಕ್ರೈಸ್ತ ಜೀವಿತದಲ್ಲಿ ಪ್ರಾರ್ಥನೆ ಎಂಬದು ಕೆಳಗಿನ ಮಾದರಿಯಲ್ಲಿ ಎಡೆಬಿಡದ ಭಾಗವಾಗಬೇಕು –



- **ಸಭೆ (ಗುಂಪು)ಯಾಗಿ ಪ್ರಾರ್ಥನೆ**
- **ಕುಟುಂಬ ಪ್ರಾರ್ಥನೆ**
- **ಪ್ರತ್ಯೇಕ ವ್ಯಕ್ತಿಗತ ಪ್ರಾರ್ಥನೆ**

**ಹೌದು! ನಾವು "ಎಡಬಿಡದೆ" ಪ್ರಾರ್ಥಿಸುತ್ತಿರುವ ಕ್ರೈಸ್ತರಾಗಿರಬೇಕು!**

ಈ "ಎಡೆಬಿಡದೆ ಪ್ರಾರ್ಥನೆ ಮಾಡುವದು" ಅಂದರೆ ಒಬ್ಬ ವ್ಯಕ್ತಿಯ ಜೀವಿತದಲ್ಲಿ ಪ್ರಾರ್ಥನೆಯ ಸ್ವಭಾವವುಳ್ಳವರಾಗಿರುವದನ್ನು ಸೂಚಿಸುತ್ತದೆ – ಪ್ರತಿದಿನದ ಎಲ್ಲಾ ವಿಷಯದಲ್ಲಿಯೂ ಯಾವಾಗಲೂ ಕರ್ತನ ಮಾರ್ಗದರ್ಶನ ಮತ್ತು ಚಿತ್ತವನ್ನು ಹುಡುಕುವವನಾಗಿರಬೇಕು!!

ಹೌದು!......ಯಾವಾಗಲೂ ಕರ್ತನನ್ನು ಹುಡುಕುವವನಾಗಿರಬೇಕು!

ಈ ವಿಷಯದಲ್ಲಿ ಬಹಳ ಅದ್ಭುತವಾದ ಉದಾಹರಣೆಯನ್ನು ನಮ್ಮ ಕರ್ತನೂ ಮತ್ತು ಯಜಮಾನನಾದ ಯೇಸು ಕ್ರಿಸ್ತನಲ್ಲಿ ನೋಡಬಹುದು, ಆತನ ಬಗ್ಗೆ ಕೆಳಗಿನ ವಾಕ್ಯದಲ್ಲಿ ಹೀಗೆ ಬರೆದಿದೆ –

**ಇಬ್ರಿಯರಿಗೆ 5:7**

**"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು."**

**ಹೌದು! ಕಲಿಯಬೇಕಾದ ಎಂತಹ ಉದಾಹರಣೆಯಾಗಿದೆ!**


ಹೌದು! ಪ್ರಿಯ ಸಹೋದರ ಮತ್ತು ಸಹೋದರಿಯರೆ ಇಂದು ನಾವು ನಮ್ಮ ಕರ್ತನಿಂದಲೇ ಪ್ರಾರ್ಥನೆಯ ಕೆಲವು ಪಾಠಗಳನ್ನು ಕಲಿತಿದ್ದೇವೆ ಮತ್ತು ಆತನು ನಮಗೆ ಕೊಟ್ಟಿರುವ ಪ್ರಾರ್ಥನಾ ಮಾದರಿಯನ್ನು ಕಲಿತಿದ್ದೇವೆ.

.......ಆಮೆನ್........



For Private Circulation Only

NOT FOR SALE




For more Subjects contact: MESSENGERS OF CHRIST E-mail: thekingdom1_6@yahoo.com